Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in principal@klsvdit.edu.in**

Date: 19-07-2022

**ಪತ್ರಿಕಾ ಪ್ರಕಟಣೆ:**

## ಬೆಂಗಳೂರಿನ ಐ. ಎಂ. ಟಿ. ಎಂ. ಎ ಹಿರಿಯ ನಿರ್ದೇಶಕರ ಭೇಟಿ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ " ಇಂಡಿಯನ್ ಮಷೀನ್ ಟೂಲ್ ಮೆನಿ ಫ್ಯಾಕ್ಚರ್ ಅಸೋಸಿಯೇಶನ್"(ಐ.ಎಂ.ಟಿ.ಎಂ.ಎ) ನ ಹಿರಿಯ ನಿರ್ದೇಶಕರಾದ ಶ್ರೀ ಕೃಷ್ಣಮೂರ್ತಿ ಎಂ ಜುಲೈ 18ರಂದು ಕೆ.ಎಲ್.ಎಸ್. ವಿ.ಡಿ.ಐ.ಟಿ ಹಳಿಯಾಳಕ್ಕೆ ಭೇಟಿ ನೀಡಿದರು. ಕೈಗಾರಿಕಾ ಉತ್ಪನ್ನ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿರುವ ಇವರು ಐ.ಎಂ.ಟಿ.ಎಂ.ಎ. ಯು ಮಹಾವಿದ್ಯಾಲಯದೊಂದಿಗೆ ಸಂಯೋಗ ಹೊಂದುವ ಇಚ್ಛೆ ವ್ಯಕ್ತಪಡಿಸಿದರು. ವಿವಿಧ ಸಂಸ್ಥೆಗಳೊಡನೆ ಐ.ಎಂ.ಟಿ.ಎಂ.ಎ ಯು ಹೊಂದಿರುವ ಸಹಯೋಗವನ್ನು ವಿವರಿಸಿದರು. ಖ್ಯಾತ ತಾಂತ್ರಿಕ ಪ್ರಾಜೆಕ್ಟ್ ಪ್ರದರ್ಶನಗಳಲ್ಲೊಂದಾದ ಐ.ಎಂ.ಟಿ.ಇ.ಎಕ್ಸ್ . ನ 2023 ರ ಪ್ರಾಜೆಕ್ಟ್ ಪ್ರದರ್ಶನ ಅವತರಣಿಕೆಯಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಉತ್ತಮವಾದ ಪ್ರಾಜೆಕ್ಟ್ ಗಳನ್ನು ಪ್ರದರ್ಶಿಸಲು ಅವಕಾಶ ಕೊಡಿಸುವ ಭರವಸೆ ನೀಡಿದರು. ಮಹಾವಿದ್ಯಾಲಯದ ಆಡಳಿತ ವಿಭಾಗದ ಡೀನ್ ಪ್ರೊ. ಮಂಜುನಾಥ ಡಿ ಶ್ರೀಯುತರಿಗೆ ಮಹಾವಿದ್ಯಾಲಯದ ಕಿರುಪರಿಚಯ ನೀಡಿದರು. ಇದೇ ಸಂದರ್ಭದಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥರಾದ ಡಾ. ಮಹೇಂದ್ರ ಡಿ, ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥರಾದ ಪ್ರೊ. ಪೂರ್ಣಿಮಾ ಆರ್, ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥರಾದ ಡಾ.ಕೆ.ಎಸ್.ಪೂಜಾರ್, ಡಾ.ಮುರುಗಯ್ಯ, ಡಾ.ಶಂಕರ್ ಬಿ ಹಾಗೂ ಟ್ರೈನಿಂಗ್ ಮತ್ತು ಪ್ಲೇಸ್ಮೆಂಟ್ ವಿಭಾಗದ ಮುಖ್ಯಸ್ಥರಾದ ಪ್ರೊ. ರಜತ್ ಎ ಉಪಸ್ಥಿತರಿದ್ದರು.

ಐ.ಎಂ.ಟಿ.ಎಂ.ಎ. ಯು ಮಹಾವಿದ್ಯಾಲಯದೊಂದಿಗೆ ಸಹಾಯೋಗ ಹೊಂದುವ ಭರವಸೆ ನೀಡಿರುವುದು ಅತೀವ ಹರ್ಷ ತಂದಿದೆ ಎಂದು ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ವಿ. ಎ. ಕುಲಕರ್ಣಿ ಅವರು ತಮ್ಮ ಪ್ರಕಟಣೆಯಲ್ಲಿ ತಿಳಿಸಿದರು.

ಪ್ರಾಂಶುಪಾಲರು

Principal
KLS Vishwanathrao Deshpande
Institute of Technology, Haliyal


470+ MEMBERS
GOVT. ADVOCACY
TRAINING
MEGA EVENTS


SINCE 1946
470+ MEMBERS
GOVT. ADVOCACY
TRAINING
IMTEX / TOOLTECH
MEGA EVENTS